ಓಃಎಸ್ಃನಂ.*434/2019*

ಪಿ.ಡಬ್ಲ್ಯೂ- *1*

ದಿನಾಂಕಃ *23-04-2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎನ್ ಆರ್ ವಕೀಲರಿಂದ

ರಾಮನಾಯ್ಕರವರು ನಿಮಗೆ ಹೇಗೆ ಸಂಬಂಧ ಎಂದರೆ ಸಾಕ್ಷಿಯು ನನಗೆ ಅಣ್ಣನಾಗಬೇಕೆಂದು ನುಡಿದಿರುತ್ತಾರೆ. ಕೃಷ್ಣಾನಾಯ್ಕರವರಿಗೆ ಎಷ್ಟು ಜನ ಮಕ್ಕಳು ಎಂದರೆ, *6* ಜನ ಗಂಡು ಮಕ್ಕಳು ಒಂದು ಹೆಣ್ಣು ಎಂದು ನುಡಿದಿರುತ್ತಾರೆ. ಕೃಷ್ಣನಾಯ್ಕರವರಿಗೆ ಮೊದಲನೆ ಮಗ ರಾಮನಾಯ್ಕ, *2*ನೇಯವರು ಗೌರಿಬಾಯಿ, *3*ನೇಯವರು ಭೀಮಾನಾಯ್ಕ ಆದ ನಾನು, *4*ನೇಯವರು ಸಕ್ರ್ಯಾ ನಾಯ್ಕ, *5*ನೇಯವರು ಗೋವಿಂದನಾಯ್ಕರಮರ, *6*ನೇಯವರು ಶಂಕರನಾಯ್ಕ, *7*ನೇಯವರು ಕುಮಾರ ಕೆ. ದಾವ ಆಸ್ತಿಯು ಮೂಲತಃ ಯಾರಿಂದ ಪಡೆದಿರುತ್ತಾರೆಂದರೆ ಸಾಕ್ಷಿಯು ಅದು ನಮ್ಮ ತಂದೆಯವರು ಸದರಿ ದಾವ ಆಸ್ತಿಯನ್ನು ಸ್ವಾಮಿನಾಯ್ಕವರಿಂದ ಖರೀದಿ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಯಾವ ಇಸವಿಯಲ್ಲಿ ದಾವ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದರೆ ನನಗೆ ನೆನಪಿಲ್ಲ. ನಮ್ಮ ತಂದೆ ಈಗ ದೈವಾಧೀನರಾಗಿದ್ದಾರೆಂದರೆ ಸರಿ. ನಮ್ಮ ತಂದೆಯವರು *2008-09*ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಸದರಿ ದಾವ ಆಸ್ತಿಯು ನಿಮ್ಮ ತಂದೆಯವರು ಖರೀದಿ ಮಾಡಿರುವುದಿಲ್ಲ, ಇದು ನಿಮ್ಮ ಕುಟುಂಬದ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ನಿಮ್ಮ ತಂದೆಯವರು ಬದುಕಿರುವ ಕಾಲದಲ್ಲಿ ವಿಭಾಗ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಈ ವಿಭಾಗದ ಬಗ್ಗೆ ನೀವು ನ್ಯಾಯಾಲಯಕ್ಕೆ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಈ ದಾವ ಆಸ್ತಿಯನ್ನು ಹೊರತುಪಡಿಸಿ, ನಿಮ್ಮ ತಂದೆಯವರಿಗೆ ಬೇರೆ ಯಾವುದಾದರೂ ಆಸ್ತಿ ಇತ್ತಾ ಎಂದರೆ ಇತ್ತು ಎಂದು ನುಡಿಯುತ್ತಾರೆ. ನಿಮ್ಮ ನಡುವೆ ನಡೆದ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ. ಸದರಿ ವಿಭಾಗ ಪತ್ರವು ನೋಂದಣಿಯಾಗಿರುವ ವಿಭಾಗ ಪತ್ರವೇ ಎಂದರೆ ಹೌದು ಎಂದು ನುಡಿದಿರುತ್ತಾರೆ. ಸದರಿ ವಿಭಾಗದ ಮೂಲಕ ನಿಮಗೆ ಬಂದ ಆಸ್ತಿಯ ವಿವರ ತಿಳಿದಿದೆಯೇ ಎಂದರೆ ಸಾಕ್ಷಿಯು ಸರ್ವೆ ನಂ.*180*/ಪಿ *75* ರಲ್ಲಿ *30* ಗುಂಟೆ ಜಮೀನು, ಸರ್ವೆ ನಂ.*215*/ಪಿ*4* ರಲ್ಲಿ *18* ಗುಂಟೆ, ಸರ್ವೆ ನಂ.*180*/ಪಿ *53* ರಲ್ಲಿ *20* ಗುಂಟೆ ಜಮೀನು ಬಂದಿರುತ್ತದೆ ಎಂದು ನುಡಿದಿರುತ್ತಾರೆ.

ಸದರಿ ವಿಭಾಗ ಪತ್ರದ ಮೂಲಕ ಅಸಸ್ ಮೆಂಟ್ *297* ನಲ್ಲಿ ನಿಮಗೆ ಭಾಗ ಬಂದಿದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಅಸಸ್ ಮೆಂಟ್ ನಂ.*297* ರಲ್ಲಿ ರಾಮನಾಯ್ಕರವರಿಗೆ ಮಾತ್ರ ವಿಭಾಗ ಆಗಿರುತ್ತದೆ. ಪ್ರತಿವಾದಿಗೆ ಅಸಸ್ ಮೆಂಟ್ ನಂ.*297* ಹೊರತುಪಡಿಸಿ, ಬೇರೆ ಸ್ವತ್ತುಗಳು ಬಂದಿದೆ ಎಂದರೆ ಸರಿ. ನೋಂದಾಯಿತ ವಿಭಾಗ ಪತ್ರವು *2004-05* ರಲ್ಲಿ ನೋಂದಣಿ ಆಯಿತು ಎಂದರೆ ಸರಿ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

*ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***